Fulset ವಿ.ಪ/ ಗೃಹ ಇಲಾಖೆ U/S 23/9/2021

ಕರ್ನಾಟಕ ವಿಧಾನ ಪರಿಷತ್ತು

01 **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : **1262 (1349)**

02 **ಸದಸ್ಯರ ಹೆಸರು** : **ಶ್ರೀ ಎಂ.ಪಿ. ಸುನೀಲ್ ಸುಬ್ರಮಣಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

03 **ಉತ್ತರಿಸುವ ದಿನಾಂಕ** : **23.09.2021**

04 **ಉತ್ತರಿಸುವ ಸಚಿವರು** : **ಮಾನ್ಯ ಗೃಹ ಸಚಿವರು**

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಕರ್ನಾಟಕ ರಾಜ್ಯದಲ್ಲಿ ವಿದೇಶಗಳಿಂದ ಬಂದು ನೆಲೆಸಿರುವ ವಿದೇಶಿ ಪ್ರಜೆಗಳ ಸಂಖ್ಯೆ ಎಷ್ಟು; ಇದರ ಬಗ್ಗೆ ಸರ್ಕಾರಕ್ಕೆ ಮಾಹಿತಿ ಇದೆಯೇ; (ವಿವರ ನೀಡುವುದು)	ಕರ್ನಾಟಕ ರಾಜ್ಯದಲ್ಲಿ ಒಟ್ಟು **11,668** ವಿದೇಶಿ ಪ್ರಜೆಗಳು ನೆಲೆಸಿರುತ್ತಾರೆ.
ಆ)	ರಾಜ್ಯದಲ್ಲಿ ವಿದೇಶಿಗರ ವೀಸಾ ಅವಧಿ ಮುಗಿದಿರುವ ಜನರನ್ನು ವಾಪಸ್ ಕಳುಹಿಸುವಲ್ಲಿ ಸರ್ಕಾರವು ಕೈಗೊಂಡ ಕ್ರಮಗಳೇನು; (ವಿವರ ನೀಡುವುದು)	ಕಳೆದ ಮೂರು ವರ್ಷದ ಅವಧಿಯಲ್ಲಿ 103 ಜನ ವಿದೇಶಿಯರನ್ನು ಕಾನೂನು ರೀತ್ಯಾ ಕ್ರಮ ಕೈಗೊಂಡು ಪ್ರಕರಣ ಇತ್ಯರ್ಥವಾದ ನಂತರ ನ್ಯಾಯಾಲಯದ ಆದೇಶದಂತೆ ಗಡಿಪಾರು ಮಾಡಲಾಗಿದೆ. ವೀಸಾ ಅವಧಿ ಮುಗಿದಿರುವ ಉಳಿದ ವಿದೇಶಿ ಪ್ರಜೆಗಳನ್ನು ವಾಪಸ್ಸು ಕಳುಹಿಸುವಲ್ಲಿ ಸರ್ಕಾರ ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತದೆ. 1. ರಾಜ್ಯದಲ್ಲಿ ವೀಸಾ ಅವಧಿ ಮುಗಿದಿರುವ ವಿದೇಶಿ ಪ್ರಜೆಗಳನ್ನು ಕಾನೂನು ಪ್ರಕಾರ ಗಡಿಪಾರು ಮಾಡಲು ಹಾಗೂ ಕ್ರಮ ಜರುಗಿಸಲು ಎಸಿಪಿ/ಡಿಸಿಪಿ ದರ್ಜೆಯ ಅಧಿಕಾರಿಗಳ ನೇತೃತ್ವದಲ್ಲಿ ಟಾಸ್ಕ್ ಫೋರ್ಸ್ ತಂಡಗಳನ್ನು ರಚಿಸಲಾಗಿರುತ್ತದೆ. ವೀಸಾ ಅವಧಿ ಮುಗಿದಿರುವ ಜನರನ್ನು ಪತ್ತೆ ಹಚ್ಚಿ, ಅವರ ವಿರುದ್ಧ ಪ್ರಕರಣ ದಾಖಲಿಸಿ ಪ್ರಕರಣ ಮುಕ್ತಾಯಗೊಂಡ ನಂತರ ಮಾನ್ಯ ನ್ಯಾಯಾಲಯದ ಆದೇಶದಂತೆ ಅವರನ್ನು ಗಡಿಪಾರು ಮಾಡಲಾಗಿರುತ್ತದೆ. 2. ವೀಸಾ ಅವಧಿ ಮುಗಿದರೂ ಸಹ ಅಕ್ರಮವಾಗಿ ವಾಸಿಸುತ್ತಿರುವ ವಿದೇಶಿ ಪ್ರಜೆಗಳ ವಿರುದ್ಧ LOC (Look Out Circular) ಹೊರಡಿಸಲಾಗಿರುತ್ತದೆ.
ಇ)	ಬೆಂಗಳೂರಿನಲ್ಲಿ ನೆಲೆಸಿರುವ ಇಂತಹ ವಿದೇಶಿಗರನ್ನು ಕನಿಷ್ಠ ಮೂರು ತಿಂಗಳಿಗೆ ಒಂದು ಸಲ ಸ್ಥಳೀಯ ಪೊಲೀಸ್ ಠಾಣೆಗಳಿಗೆ ಅವರುಗಳ ವೀಸಾಗಳನ್ನು ತಂದು ಪರಿಶೀಲನೆ ನಡೆಸುವ ಬಗ್ಗೆ ಸರ್ಕಾರದ ಕ್ರಮಗಳೇನು; (ವಿವರ ನೀಡುವುದು)	ಪ್ರಕರಣ ದಾಖಲಿಸಲಾದ ವಿದೇಶಿ ಪ್ರಜೆಗಳ ಪ್ರಕರಣಗಳು ವಿಚಾರಣೆ ಹಂತದಲ್ಲಿದ್ದಲ್ಲಿ **(Pending Trial)** ಸಂಬಂಧಪಟ್ಟ ಇಲಾಖೆಯಿಂದ ನಿರ್ಗಮನ ಪರವಾನಿ **(Exit Permit)**ಗೆಯನ್ನು ಪಡೆಯುವವರೆಗೆ ಗಡಿಪಾರು ಮಾಡಲು ಸಾಧ್ಯವಾಗುವುದಿಲ್ಲ. ಆದುದರಿಂದ, ಗಡಿಪಾರು ಮಾಡಲು ಸಾಧ್ಯವಾಗದ ಪಕ್ಷದಲ್ಲಿ ಪ್ರಕರಣ ದಾಖಲಾದ ವಿದೇಶಿ ಪ್ರಜೆಗಳನ್ನು ಪ್ರತಿ ತಿಂಗಳು ಅವರು ಅದೇ ವಿಳಾಸದಲ್ಲಿ ವಾಸವಾಗಿರುವ ಬಗ್ಗೆ ಹಾಗೂ ಅವಶ್ಯಕತೆ ಕಂಡುಬಂದಲ್ಲಿ ಠಾಣೆಗೆ ಕರೆಸಿ ವಿಚಾರಣೆ ಮಾಡಲಾಗುತ್ತಿದೆ.

ಈ)	ಆಫ್ರಿಕನ್ ದೇಶಗಳಿಂದ ಬಂದ ವಿದೇಶಿಗರು ಹೆಚ್ಚಿನ ಸಂಖ್ಯೆಯಲ್ಲಿ ಅಕ್ರಮ ಚಟುವಟಿಕೆಯಲ್ಲಿ ಭಾಗವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇವರುಗಳ ಮೂಲ ದೇಶಗಳನ್ನು ತಿಳಿದು ಆಯಾ ದೇಶಗಳಿಗೆ ಇವರುಗಳ ಅಕ್ರಮ ವಿಷಯಗಳನ್ನು ಕೇಂದ್ರ ಸರ್ಕಾರದ ಮೂಲಕ ತಿಳಿಸುವ ಬಗ್ಗೆ ಸರ್ಕಾರದ ನಿಲುವೇನು; (ಮಾಹಿತಿ ಒದಗಿಸುವುದು)	ಹೌದು ಬೆಂಗಳೂರು ನಗರದಲ್ಲಿ ವಾಸವಾಗಿರುವ ಎಲ್ಲಾ ವಿದೇಶಿ ಪ್ರಜೆಗಳಲ್ಲಿ ಆಫ್ರಿಕನ್ ದೇಶದಿಂದ ಬಂದ ವಿದೇಶಿಯರು ಹೆಚ್ಚಿನ ಸಂಖ್ಯೆಯಲ್ಲಿ ವಾಸವಾಗಿರುತ್ತಾರೆ. ಆಫ್ರಿಕನ್ ಹಾಗೂ ಯಾವುದೇ ದೇಶದ ವಿದೇಶಿ ಪ್ರಜೆಯು ಅಕ್ರಮ ಚಟುವಟಿಕೆಯಲ್ಲಿ ಭಾಗಿಯಾದಲ್ಲಿ ಅವರ ವಿರುದ್ಧ ಕಾನೂನು ರೀತಿಯ ಕ್ರಮ ಕೈಗೊಂಡು, ಆರೋಪಿಗಳನ್ನು ನಿಯಮಾವಳಿಗಳ ಮೂಲಕ ಆಯಾ ದೇಶಗಳಿಗೆ ಕಳುಹಿಸಿಕೊಡುತ್ತಿದ್ದು, ಈ ಬಗ್ಗೆ ವಿದೇಶಾಂಗ ವ್ಯವಹಾರಗಳ ಸಚಿವಾಲಯಕ್ಕೆ ಕಾಲಕಾಲಕ್ಕೆ ಮಾಹಿತಿ ನೀಡಲಾಗುತ್ತಿದೆ.

ಒಇ 300 ಪಿಎಂಎಸ್ 2021

(ಆರಗ ಜ್ಞಾನೇಂದ್ರ)
ಗೃಹ ಸಚಿವರು